# ಸುಂದರಿ ಕತ್ರಿನಾಗೆ ಸ್ಟಂಟ್ ತರಬೇತಿ

■ ವಿಶಾಖ ಎನ್.




‘ಏಕ್ ಥಾ ಟೈಗರ್’ ಹಾಗೂ ‘ಟೈಗರ್ ಜಿಂದಾ ಹೈ’ ಚಿತ್ರಗಳ ಮೂಲಕ ಚಿತ್ರರಸಿಕರ ಮನ ಗೆದ್ದಿದ್ದ ಸಲ್ಮಾನ್ ಖಾನ್, ಕತ್ರಿನಾ ಕೈಫ್ ಜೋಡಿ ಮತ್ತೆ ‘ಟೈಗರ್ 3’ ಚಿತ್ರಕ್ಕೆ ಸಜ್ಜಾಗುತ್ತಿದೆ. ಸಾಮಾನ್ಯವಾಗಿ ಸಲ್ಮಾನ್ ಏನೆಲ್ಲ ಸ್ಟಂಟ್ ಮಾಡುತ್ತಾರೆ ಎನ್ನುವುದು ಸುದ್ದಿಯಾಗುತ್ತದೆ. ಇದೀಗ ಕತ್ರಿನಾ ಸ್ಟಂಟ್‌ಗೆ ಅಣಿಯಾಗುತ್ತಿರುವ ಸಂಗತಿ ಸದ್ದು ಮಾಡುತ್ತಿದೆ. ಇಸ್ತಾನ್‌ಬುಲ್, ಯುರೋಪ್ ಹಾಗೂ ಯುಎಇಯಲ್ಲಿ ‘ಟೈಗರ್ 3’ ಚಿತ್ರೀಕರಣ ನಡೆಯಲಿದೆ.

ದಕ್ಷಿಣ ಕೊರಿಯಾದ ಸ್ಟಂಟ್ ಕಲಾವಿದರು ಎರಡು ವಾರ ಕತ್ರಿನಾ ಅವರನ್ನು ಬೆಂಡೆತ್ತುತ್ತಿದ್ದಾರೆ. ಫಿಟ್‌ನೆಸ್ ಪ್ರಜ್ಞೆಯಲ್ಲೇ ಬದುಕುವ ಕತ್ರಿನಾಗೆ ದೇಹವನ್ನು ಎಲ್ಯಾಸ್ಟಿಕ್‌ನಂತೆ ಬಾಗಿಸುವುದೇನೂ ಕಷ್ಟವಲ್ಲ. ಕುಣಿತದಲ್ಲೂ ಅವರಿಗೆ ಅವರೇ ಸಾಟಿ. ‘ಏಕ್ ಥಾ ಟೈಗರ್’ನ ಯಶಸ್ಸಿನಲ್ಲಿ ಅವರ ನೃತ್ಯದ ಪಾಲೂ ಇತ್ತೆನ್ನಿ. ಈ ಭಾಗದ ನಿರ್ದೇಶಕ ಮನೀಷ್ ಶರ್ಮ ಹೀಗೆಯೇ ದೃಶ್ಯಗಳು ಮೂಡಿಬರಬೇಕು ಎಂದು ಹೋಂವರ್ಕ್ ಮಾಡಿಕೊಂಡಿದ್ದಾರೆ. ಸಲ್ಮಾನ್ ಸ್ಟಂಟ್‌ಗಳು ಎಷ್ಟು ರೋಚಕವೋ, ಕತ್ರಿನಾ ಹೊಡೆದಾಟಕ್ಕೂ ಅಷ್ಟೇ ಮಹತ್ವವಿದೆ ಎಂದಿದ್ದಾರೆ.

ಒಂದು ಕಡೆ ಸಲ್ಮಾನ್‌ಗೆ ಸ್ಟಂಟ್ ತರಬೇತಿ ನೀಡಲು ದಕ್ಷಿಣ ಆಫ್ರಿಕಾದ ಕಲಾವಿದರ ತಂಡ ಬಂದಿದೆ. ಇನ್ನೊಂದೆಡೆ ಕತ್ರಿನಾಗೆ ದಕ್ಷಿಣ ಕೊರಿಯಾದ ಸ್ಟಂಟ್ ವರಸೆಗಳನ್ನು ಕಲಿಯುವ ಅವಕಾಶ. ಮುಂಬೈನಲ್ಲಿ ಸಿನಿಮಾದ ಮೊದಲ ಹಂತದ ಚಿತ್ರೀಕರಣ ಪ್ರಾರಂಭವಾಗಲಿದೆ. ಸ್ಟಂಟ್‌ಗಳಿಗೆ ಹೆಚ್ಚು ಒತ್ತು ನೀಡಿ ಈ ಚಿತ್ರವನ್ನು ಮೇಲಕ್ಕೆತ್ತಲು ಬ್ಲೂಪ್ರಿಂಟ್ ಸಿದ್ಧವಾಗಿದೆ. ನಿರ್ಮಾಪಕ ಆದಿತ್ಯ ಚೋಪ್ರಾ ಅಷ್ಟೆಲ್ಲ ಸ್ಟಂಟ್ ಕಲಾವಿದರನ್ನು ವಿದೇಶಗಳಿಂದ ಕರೆಸಿ, ನಾಯಕ–ನಾಯಕಿಗೆ ತರಬೇತಿ ಕೊಡಿಸಲು ಕಂಡಾಪಟ್ಟೆ ಹಣ ಖರ್ಚು ಮಾಡುತ್ತಿದ್ದಾರೆ. ನಿತ್ಯ ವ್ಯಾಯಾಮದ ನಂತರ ಕತ್ರಿನಾ ಹೊಸ ಸ್ಟಂಟ್‌ಗಳನ್ನು ಅಭ್ಯಾಸ ಮಾಡಲು ಎರಡು ವಾರ ಸಮಯ ವಿನಿಯೋಗಿಸಲಿದ್ದಾರೆ. ಸಲ್ಮಾನ್ ಹಾಗೂ ಕತ್ರಿನಾ ಇಬ್ಬರ ರೊಮ್ಯಾನ್ಸ್ ನೋಡಿ ಒಂದು ಕಾಲದಲ್ಲಿ ಜನ ಕಣ್ಣರಳಿಸಿದ್ದರು. ಈಗ ಕಸರತ್ತು ನೋಡಿ ಬಾಯಿ ಬಿಡಬೇಕು. ■



# ಮಂಗ್ಲಿ ಮೋಡಿ

ಸತ್ಯವತಿ ರಾಥೋಡ್ ಎಂಬ ಹೆಣ್ಣುಮಗಳೀಗ ‘ಮಂಗ್ಲಿ ಚಿನ್ಮಯಿ’ ಎಂದೇ ಜನಪ್ರಿಯರು. ಬಂಜಾರ ಸಮುದಾಯದ ಈ ಹುಡುಗಿ ತೆಲಂಗಾಣದ ಭಜನೆಗಳನ್ನು ಹಾಡುತ್ತಲೇ ಯೂಟ್ಯೂಬ್‌ನಲ್ಲಿ ಹೆಸರು ಮಾಡಿದರು. ‘ಅಲಾ ವೈಕುಂಠಪುರಮುಲೊ’ ತೆಲುಗು ಚಿತ್ರದಲ್ಲಿ ‘ರಾಮುಲೋ ರಾಮುಲಾ’ ಹಾಡಿಗೆ ದನಿಯಾದ ಮೇಲೆ ಜನಪ್ರಿಯತೆಯ ಗ್ರಾಫು ಮೇಲಕ್ಕೇರಿತು. ಮಾಲ್ಗುಡಿ ಶುಭ ಅವರ ಕಂಠಕ್ಕೆ ಇದ್ದಂತಹ ಹಿಡಿದಿಡುವ ಗುಣ, ದೊಡ್ಡ ಸ್ಥಾಯಿ ಇವರ ಶಾರೀರಕ್ಕೂ ಇದೆ. ಮೀಟರುಗಟ್ಟಲೆ ದೂರಕ್ಕೂ ಮೈಕ್ ಇಲ್ಲದೆ ದನಿ ಕೇಳುವಷ್ಟು ತನ್ಮಯತೆಯಿಂದ ಹಾಡಬಲ್ಲರೆನ್ನುವುದು ಬೋನಸ್ಸು.

ಇಂತಿಪ್ಪ ಗಾಯಕಿ ಕನ್ನಡದ ‘ರಾಬರ್ಟ್’ ಚಿತ್ರದ ತೆಲುಗು ವರ್ಶನ್ ಹಾಡಿಗೆ ಕಂಠ ನೀಡಿ ಸುದ್ದಿಯಲ್ಲಿದ್ದಾರೆ. ‘ಕಣ್ಣೆ ಅದಿರಿಂದಿ’ ಎಂಬ ಅವರ ಹಾಡು ಕೇಳಿದವರು ಸದ್ಯಕ್ಕೆ ‘ಚಿಂದಿ ಚಿಂದಿ’ ಎನ್ನುತ್ತಿದ್ದಾರೆ. ಅರ್ಜುನ್ ಜನ್ಯ ಹಾಗೂ ದರ್ಶನ್ ತೆಲುಗಿನಲ್ಲಿ ಈ ಗಾಯಕಿಯ ಕೈಲಿ ಹಾಡಿಸುವ ನಿರ್ಧಾರ ಕೈಗೊಂಡಿದ್ದು ದೊಡ್ಡ ಫಲವನ್ನೇ ನೀಡಿದೆ. ಅಲ್ಲಿ ಸಿನಿಮಾ ಪ್ರಚಾರದ ಸಮಾರಂಭದಲ್ಲಿ ವೇದಿಕೆ ಮೇಲೆ ಮಂಗ್ಲಿ ಹಾಡಿದ ಗೀತೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಗಾಯಕಿಯಾಗಲು ತಂದೆ ನೀರೆರೆದರು. ಸಂಗೀತದ ಟೀಚರ್ ಆಗಬೇಕೆಂದು ಹೈದರಾಬಾದ್‌ಗೆ ವಲಸೆ ಬಂದ ಈ ಪ್ರತಿಭಾವಂತೆ, ಅವಕಾಶಕ್ಕಾಗಿ ಬೆಂಗಳೂರಿಗೂ ಎಡತಾಕಿದ ದಿನಗಳಿದ್ದವು. ಈಗ ಕನ್ನಡ ಸಿನಿಮಾದ ತೆಲುಗು ಅವತರಣಿಕೆಯ ಹಾಡನ್ನು ಜನಪ್ರಿಯಗೊಳಿಸುವ ಮೂಲಕ ದರ್ಶನ್ ದೊಡ್ಡ ಹೆಜ್ಜೆಯನ್ನು ಆ ನಾಡಿನಲ್ಲಿ ಇಡಲೂ ಪರೋಕ್ಷವಾಗಿ ಕಾರಣರಾಗಿದ್ದಾರೆ. ಮಂಗ್ಲಿ ಕಂಠ ಕೇಳಿ ಇನ್ನಷ್ಟು ಸ್ವರ ಸಂಯೋಜಕರು ಅವರಿಂದ ಹಾಡಿಸುವ ಉತ್ಸಾಹ ತೋರಲಾರಂಭಿಸಿದ್ದಾರೆ. ■